ಹೊಸದಾಗಿ ತಾಲ್ಲೂಕುಗಳ ರಚನೆ

881 (765); ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ)

ಅ) ರಾಜ್ಯದಲ್ಲಿ ಹೊಸದಾಗಿ ತಾಲ್ಲೂಕುಗಳನ್ನು ರಚಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಹೊಸದಾಗಿ ತಾಲ್ಲೂಕುಗಳನ್ನು ರಚಿಸಲಾಗುತ್ತಿದೆ; (ವಿವರ ನೀಡುವುದು)

ಆ) 2012–13ನೇ ಸಾಲಿನಲ್ಲಿ ಸರ್ಕಾರ ಹೊಸ ತಾಲ್ಲೂಕುಗಳನ್ನು ರಚಿಸಿ ಆದೇಶ ನೀಡಿರುವುದು ನಿಜವೇ; ಹಾಗಿದ್ದಲ್ಲಿ ಈ ತಾಲ್ಲೂಕುಗಳನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ರಾಜ್ಯ ಸರ್ಕಾರ ದಿನಾಂಕ: 08.02.2013 ರಂದು ಮಂಡಿಸಿದ 2013–14ನೇ ಆಯವ್ಯಯದಲ್ಲಿ 43 ಹೊಸ ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಿಸಿರುತ್ತದೆ. ಘೋಷಿತ ತಾಲ್ಲೂಕುಗಳ ವಿವರ ಈ ಕೆಳಗಿನಂತಿರುತ್ತದೆ.

1. ಬಾಗಲಕೋಟೆ ಜಿಲ್ಲೆ– ಗುಳೇದಗುಡ್ಡ, ರಬಕವಿ–ಬನಹಟ್ಟಿ ಮತ್ತು ಇಳಕಲ್
2. ಬೆಳಗಾವಿ ಜಿಲ್ಲೆ– ನಿಪ್ಪಾಣಿ, ಮೂಡಲಗಿ ಮತ್ತು ಕಾಗವಾಡ
3. ಚಾಮರಾಜನಗರ ಜಿಲ್ಲೆ– ಹನೂರು
4. ದಾವಣಗೆರೆ ಜಿಲ್ಲೆ– ನ್ಯಾಮತಿ
5. ಬೀದರ್ ಜಿಲ್ಲೆ– ಚಿಟಗುಪ್ಪ, ಹುಲಸೂರು ಮತ್ತು ಕಮಲಾಪುರ
6. ಬಳ್ಳಾರಿ ಜಿಲ್ಲೆ– ಕುರುಗೋಡು, ಕೊಟ್ಟೂರು ಮತ್ತು ಕಂಪ್ಲಿ
7. ಧಾರವಾಡ ಜಿಲ್ಲೆ– ಅಣ್ಣಿಗೇರಿ, ಅಳ್ನಾವರ ಮತ್ತು ಹುಬ್ಬಳ್ಳಿ ನಗರ
8. ಗದಗ ಜಿಲ್ಲೆ– ಗಜೇಂದ್ರಗಡ ಮತ್ತು ಲಕ್ಷ್ಮೇಶ್ವರ
9. ಕಲಬುರಗಿ ಜಿಲ್ಲೆ– ಕಾಳಗಿ, ಕಮಲಾಪುರ ಮತ್ತು ಶಹಾಬಾದ್
10. ಯಾದಗಿರ್ ಜಿಲ್ಲೆ ಹುಣಸಗಿ, ಯಡ್ರಾವಿ, ವಡಗೆರ ಮತ್ತು ಗುರುಮಿಟ್ಕಲ್

11. ಕೊಪ್ಪಳ ಜಿಲ್ಲೆ– ಕುಕನೂರು, ಕನಕಗಿರಿ ಮತ್ತು ಕಾರಟಗಿ
12. ರಾಯಚೂರು ಜಿಲ್ಲೆ– ಮಸ್ಕಿ ಮತ್ತು ಸಿರವಾರ
13. ಉಡುಪಿ ಜಿಲ್ಲೆ– ಬ್ರಹ್ಮಾವರ ಮತ್ತು ಬೈಂದೂರು
14. ದಕ್ಷಿಣ ಕನ್ನಡ ಜಿಲ್ಲೆ– ಮೂಡಬಿದರೆ ಮತ್ತು ಕಡಬ
15. ಬೆಂಗಳೂರು ನಗರ ಜಿಲ್ಲೆ– ಯಲಹಂಕ
16. ವಿಜಯಪುರ ಜಿಲ್ಲೆ– ಬಬಲೇಶ್ವರ, ನಿಡಗುಂದಿ, ತಿಕೋಟ, ದೇವರಹಿಪ್ಪರಗಿ, ತಾಳಿಕೋಟೆ, ಚಡಚಣ ಮತ್ತು ಕೋಲ್ಹಾರ.

ಆ) ಇಲ್ಲ.
ಉದ್ಭವಿಸುವುದಿಲ್ಲ.

ಏತ ನೀರಾವರಿ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಿರುವುದು

882 (1133); ಶ್ರೀ ಭೀಮಾನಾಯ್ಕ ಎಸ್.

ಅ) ಹಗರಿಬೊಮ್ಮನಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಡಿ ಎಷ್ಟು ಏತ ನೀರಾವರಿ ಯೋಜನೆಗಳಿವೆ; (ವಿವರ ನೀಡುವುದು)

ಆ) ಈ ಏತ ನೀರಾವರಿ ಯೋಜನೆಗಳ ದುರಸ್ಥಿಗೆ ಯಾವ ಲೆಕ್ಕ ಶೀರ್ಷಿಕೆಯಡಿ, ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ? (ಲೆಕ್ಕ ಶೀರ್ಷಿಕೆವಾರು ಮೂರು ವರ್ಷಗಳ ಸಂಪೂರ್ಣ ವಿವರ ನೀಡುವುದು)

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಮತ್ತು ಆ) ಹಗರಿಬೊಮ್ಮನಹಳ್ಳಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಅಡಿಯಲ್ಲಿ ಬರುವ ಒಟ್ಟು 17 ಏತ ನೀರಾವರಿ ಯೋಜನೆಗಳು ಅಸ್ಥಿತ್ವದಲ್ಲಿರುತ್ತವೆ. ಈ ಏತ ನೀರಾವರಿ ಯೋಜನೆಗಳಿಗೆ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ವೆಚ್ಚದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.